ಅ.ದಾ. ನಂ.764/2013

ಡಿ.ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 25-02-2020

**ಪಾಟೀ ಸವಾಲುಃ**- ಶ್ರೀ ಜಿ.ವಿ.ವಿ ವಕೀಲರಿಂದ

ಹೊಸಹಳ್ಳಿಯಿಂದ ಜಿನ್ನಹಳ್ಳಿ 4 ಕಿ.ಮೀ ದೂರದಲ್ಲಿದೆ. ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ನಾನು ಲೆಕ್ಕಪರಿಶೋಧಕನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿ ನನ್ನ ಸೈಟನ್ನು ಖರೀದಿಸಲು ಕೇಳಿದ್ದು, ಅವರೇ ನನ್ನ ಸೈಟನ್ನು ಕೊಂಡುಕೊಳ್ಳಿ ಎಂದು ಹೇಳಿರುತ್ತಾರೆ. ಸೈಟ್ ನಂ. 30/1, ಅಸ್ಸೆಸ್ಮೆಂಟ್ ನಂ.10/10 ನ್ನು ನನಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ. ಅದು ಪುರಸಭೆಗೆ ಸಂಬಂಧಪಟ್ಟ ಜಾಗವಾಗಿರುತ್ತದೆ. ನಾನು ಕ್ರಯಕ್ಕೆ ತೆಗೆದುಕೊಂಡ ಸ್ಥಳದಲ್ಲಿ ಶವಗಳನ್ನು ಹಿಂದೆ ಸುಡುತ್ತಿದ್ದರು. ಸದರಿ ಸ್ವತ್ತು ವಾದಿಗೆ ಪಾಲುಪಾರಿಕತ್ತಿನ ಮೂಲಕ ಬಂದಿರುತ್ತದೆ. ಪಾಲುಪಾರಿಕತ್ತನ್ನು ನಾನು ನೋಡಿದ್ದೇನೆ. ಪಾಲುಪಾರಿಕತ್ತಿನ ನಕಲು ನನ್ನ ಬಳಿ ಇಲ್ಲ. ವಾದಿ ನನಗೆ ಕ್ರಯಕ್ಕೆ ಕೊಟ್ಟಿರುವ ಸ್ವತ್ತನ್ನು ಹೊರತುಪಡಿಸಿ ಬೇರೆ ಇತರೆ ಸ್ವತ್ತುಗಳು ವಾದಿಗೆ ಎಷ್ಟಿವೆ ನನಗೆ ಗೊತ್ತಿಲ್ಲ. ನನ್ನ ಸೈಟಿಗೆ ಚೆಕ್ಕುಬಂದಿ ಹಾಕಿದರೆ ಮಾತ್ರ ಗುರುತಿಸಲು ಸಾಧ್ಯ ಎಂದರೆ ಸರಿ . ನಾನು ಕ್ರಯಕ್ಕೆ ಕೊಂಡುಕೊಂಡ ಸ್ವತ್ತು ವಾದಿಗೆ ಸೇರಿದ್ದು ಎಂದು ತೋರಿಸಲು ನನ್ನ ಬಳಿ ಕ್ರಯಪತ್ರ ಇದೆ.

ನ್ಯಾಯಾಲಯಕ್ಕೆ ವಾದಿ ದಾವೆಯನ್ನು ದಾಖಲಿಸುವ ಸಮಯಕ್ಕೆ ನನ್ನ ಬಳಿ ಕ್ರಯಪತ್ರ ಇತ್ತು. ನಿಡಿ-4 ನಾನು ಕ್ರಯಕ್ಕೆ ಪಡೆದ ಸ್ವತ್ತಿನ ದಾಖಲೆ . ನಿಡಿ-4 ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಡಿ-4 ನ್ನು ಬರೆಯುವ ಕಾಲಕ್ಕೆ ವಾದಿಗೆ ಸಂಪೂರ್ಣ ಹಣ ನೀಡಿರುತ್ತೇನೆ. ಕರಾರು ಬರೆದ ದಿನವೇ ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಾಗಿಲ್ಲ ಕಾರಣ ವಾದಿಯು ನನಗೆ ಸಮಯ ಇಲ್ಲ 3 ದಿನ ಬಿಟ್ಟು ಕ್ರಯಪತ್ರ ನೋಂದಣಿ ಮಾಡಿಸಿಕೊಡುತ್ತೇನೆ ಎಂದು ತಿಳಿಸಿರುತ್ತಾರೆ ವಾದಿಯಿಂದ ನಾನು ಕ್ರಯಪತ್ರ ಬರೆಸಿಕೊಳ್ಳುವ ಇಂಗಿತ ನನಗೆ ಇತ್ತು. ಕರಾರನ್ನು ಬರೆಯುವ ಕಾಲಕ್ಕೆ ದಾವಾ ಸ್ವತ್ತಿನ ವಿಸ್ತೀರ್ಣ, ಖಾತಾ ಸಂಖ್ಯೆ ಚೆಕ್ಕುಬಂಧಿ ತೋರಿಸಲು ವಾದಿಯು ಪಾಲುಪಾರಿಕತ್ತನ್ನು ತಂದು ಕರಾರು

ಬರೆದುಕೊಟ್ಟಿರುತ್ತಾರೆ. ವಾದಿಯ ಪಾಲುಪಾರಿಕತ್ತನ್ನು ನಾನು ನೋಡಿ ತಿಳಿದುಕೊಂಡಿಲ್ಲ, ನನಗೆ ಕರಾರು ಬರೆದುಕೊಟ್ಟ ಸ್ವತ್ತು ಮಾತ್ರ ವಾದಿಯ ಹಿಸ್ಸೆಗೆ ಬಂದಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಲೆಕ್ಕಪರಿಶೋಧಕರ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಲೆಕ್ಕಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೋಧನೆ ಮಾಡುತ್ತಿದ್ದೆ. ನಿಡಿ-4 ರಂತೆ ಕ್ರಯಪತ್ರ ಬರೆಸಿಕೊಂಡ ಕಾಲಕ್ಕೆ ಕೆ.ಆರ್.ಪೇಟೆಯ ಹೇಮಾವತಿ ಇಲಾಖೆಯ ಇಂಜಿನಿಯರಿಂಗ್ ವಿಭಾಗದಲ್ಲಿ ನಾನು ನಗದು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆನು. ನಿಡಿ-4 ರಲ್ಲಿ ನಾನು ಕರಾರು ಬರೆಸಿಕೊಂಡ ಸ್ವತ್ತಿನ ಚೆಕ್ಕುಬಂದಿ ನಮೂದಾಗಿಲ್ಲ. ನಾನು ಕರಾರು ಬರೆಸಿಕೊಂಡ ಸ್ವತ್ತಿನ ಸ್ಕೆಚ್ಚನ್ನು ನಾನು ಪಡೆದುಕೊಂಡಿಲ್ಲ. ನಿಡಿ-4 ರಲ್ಲಿ ಚೆಕ್ಕುಬಂದಿ ಬಿಟ್ಟುಹೋಗಿದೆ, ಆದ್ದರಿಂದ ತಿದ್ದುಪಡಿ ಕರಾರನ್ನು ಬರೆದುಕೊಡಿ ಎಂದು ನಾನು ವಾದಿಯನ್ನು ಕೇಳಿಲ್ಲ. ಸೈಟ್ ನಂಬರ್ ಆಧಾರದ ಮೇಲೆ ನಿಡಿ-4 ರಲ್ಲಿನ ಸ್ವತ್ತಿನ ಸ್ಕೆಚ್ಚನ್ನು ನಿಡಿ-17 ರಲ್ಲಿ ಮಾಡಿಸಿದ್ದೇನೆ. ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಗುರುತಿಸುವ ಬಗ್ಗೆ ನಿಡಿ-17 ನ್ನು ತಯಾರಿಸಿರುತ್ತೇನೆ. ಅದನ್ನು ಗುರುತಿಸಲು ನಿಡಿ-4 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ನಿಡಿ-17 ನ್ನು ತಯಾರು ಮಾಡಿದ ದಿನಾಂಕ, ಇಸವಿ ನಮೂದಾಗಿಲ್ಲ ಎಂದರೆ ಸರಿ.

ನಿಡಿ-17 ರಂತೆ ಕಟ್ಟಡ ಪರವಾನಿಗೆಯನ್ನು 1999 ರಲ್ಲಿ ಪಡೆದಿದ್ದೇನೆ. ಕಟ್ಟಡ ಪರವಾನಿಗೆ ಪಡೆಯಲು ನಾನು ಪುರಸಭೆಗೆ ನಾನು ನನ್ನ ಸ್ವತ್ತಿನ ಚೆಕ್ಕುಬಂದಿ ನೀಡಿಲ್ಲ, ಅವರೇ ಚೆಕ್ಕುಬಂದಿ ನೀಡಿ ಪರವಾನಿಗೆ ನೀಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. 1999 ರಲ್ಲಿ ಕಟ್ಟಡ ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಿದ್ದೇನೆ. ಪುರಸಭೆಯವರು ಪರವಾನಿಗೆ ನೀಡುವ ಸಮಯದಲ್ಲಿ ಸ್ಥಳಕ್ಕೆ ಬಂದು ಅಳತೆ ಮಾಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ವರದಿ, ನಕಾಶೆ ಇರುವುದಿಲ್ಲ. ಕಂದಾಯ ಪಾವತಿಸಿದ ರಶೀದಿಗಳಲ್ಲಿ ಚೆಕ್ಕುಬಂಧಿ ನಮೂದಾಗಿಲ್ಲ. ನಿಡಿ-4 ರಲ್ಲಿ ನಮೂದಾಗಿರುವ ಸ್ವತ್ತಿನಲ್ಲಿ ಪ್ರತಿಕೂಲ ಸ್ವಾಧೀನದಲ್ಲಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ವಾದಿಯು ನನಗೆ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡಬೇಕು. 1995 ರಿಂದ ಈ ದಾವೆ ದಾಖಲಿಸುವವರೆಗೆ ವಾದಿಯನ್ನು

ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವಂತೆ ಕೇಳಿರುತ್ತೇನೆ. ವಾದಿಯು ನೋಂದಣಿ ಮಾಡಿಸಿ ಕೊಡದ ಕಾರಣ 1995 ರಿಂದ 2013 ರವರೆಗೆ ಅವರ ವಿರುದ್ಧ ನಾನು ದೂರು ದಾಖಲಿಸಿಲ್ಲ, ವಕೀಲರ ಮೂಲಕ ತಿಳುವಳಿಕಾ ನೋಟೀಸ್ ನೀಡಿಲ್ಲ ಕಾರಣ ಅವರು ನನಗೆ ನೋಂದಣಿ ಮಾಡಿಸಿಕೊಡುತ್ತಾರೆ ಎಂಬ ನಂಬಿಕೆ ಇತ್ತು.

1995 ರಿಂದ 2013 ರವರೆಗೆ ವಾದಿಯ ವಿರುದ್ಧ ನಾನು ಕ್ರಯಪತ್ರ ನೋಂದಣಿ ಮಾಡಿಸಿಕೊಡುವಂತೆ ದಾವಾ ದಾಖಲಿಸಿಲ್ಲ ಕಾರಣ ಅವರು ನೋಂದಣಿ ಮಾಡಿಸಿಕೊಡುತ್ತಾರೆ ಎಂಬ ನಂಬಿಕೆ ಇತ್ತು. ವಾದಿ ನನಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ, ನಿಡಿ-4 ನ್ನು ಈ ಕೇಸಿಗೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕುಬಂದಿ ಇಲ್ಲದ ನಿಡಿ-4 ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ವಾದಿಯ ಸ್ವತ್ತನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ಅಕ್ರಮವಾಗಿ ನಾನು ಲಪಟಾಯಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ